**ದಿನಾಂಕಃ 06.08.2025** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಮ್ಮ ಊರಿನಲ್ಲಿ ಸುಮಾರು 150 ಮನೆಗಳಿರುತ್ತವೆ. ಪ್ರಸ್ತುತ ದಾವೆಯನ್ನು ಶಂಕರಪ್ಪ ಮತ್ತು ಪದ್ಮಕ್ಕ ನವರು ಉಗ್ರೇಶ್ ಮತ್ತು ಇತರರ ವಿರುದ್ಧ ಹಾಕಿರುತ್ತಾರೆ. ದಾವಾ ಸ್ವತ್ತಿನ ಸುತ್ತಲು ನನಗೆ ಸೇರುವ ಯಾವುದೇ ಜಮೀನು ಅಥವಾ ಮನೆ ಇರುವುದಿಲ್ಲ. ನಮ್ಮ ಮನೆ ದಾವಾ ಸ್ವತ್ತಿನಿಂದ ಅರ್ಧ ಕಿ.ಮೀ. ದೂರದಲ್ಲಿದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಉಗ್ರೇಶ್ ರವರು ಪ್ರಭಾವಿ ರಾಜಕಾರಣಿ ಎಂದರೆ ಸರಿಯಲ್ಲ. ನನ್ನ ವಿರುದ್ಧ ಓ.ಎಸ್. 45/2013 ರಲ್ಲಿ ರಂಗನಾಥಪ್ಪ ರವರು ನನ್ನ ವಿರುದ್ಧ ದಾವೆ ಹೂಡಿದ್ದಾರೆ ಎಂದರೆ ಅದು ನನ್ನ ವಯಕ್ತಿಕ ಎಂದು ನುಡಿರುತ್ತಾರೆ. ನನ್ನ ವಿರುದ್ಧ ಓ.ಎಸ್. 454/2024 ರಲ್ಲಿ ರಂಗನಾಥಪ್ಪ ರವರು ನನ್ನ ವಿರುದ್ಧ ದಾವೆ ಹೂಡಿದ್ದಾರೆ ಎಂದರೆ ಸರಿ. ನನ್ನ ವಿರುದ್ಧ ರಂಗನಾಥಪ್ಪ ರವರು ಕ್ರಿಮಿನಲ್ ಪ್ರಕರಣವನ್ನು ಹೂಡಿದ್ದಾರೆ ಎಂದರೆ ಅದು ನನ್ನ ವಯಕ್ತಿಕ ಎಂದು ನುಡಿರುತ್ತಾರೆ. ನಾನು ಬಸವರಾಜಪ್ಪ ಬಿನ್ ವೀರಪ್ಪನವರ ವಿರುದ್ದ ಒ.ಎಸ್ 65/2021 ರ ದಾವೆ ಹಾಕಿರುತ್ತೇನೆ ಎಂದರೆ ಸರಿ. ಅದೇ ರೀತಿ ನಾನು ಪಿ.ಸಿ.ಆರ್ 29/2014 ರ ಪ್ರಕರಣವನ್ನು ರಂಗನಾಥ್ ರವರ ವಿರುದ್ದ ಹಾಕಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತು ಶಿರಾ ದಿಂದ ಮೂರು ಕಿ.ಮೀ ದೂರದಲ್ಲಿರುತ್ತದೆ. ದಾವಾ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಕೊಟ್ಟಮಂಡಲ್ ಪಂಚಾಯಿತಿಯವರು ವಾದಿಯವದ ಪದ್ಮಮ್ಮರವರಿಗೆ ದಿಃ10.01.1990 ರಂದು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದ ವಾದಿಯವರು ದಾವಾ ಸ್ವತ್ತಿನಲ್ಲಿ ಕಂದಾಯ ಕಟ್ಟಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಗ್ರಾಮಠಾಣೆ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಅಂಗನವಾಡಿ ಇದೆ ಎಂದರೆ ಸರಿ. ಅಂಗನವಾಡಿ ಕಟ್ಟಡವನ್ನು ಕಟ್ಟಿ ಸುಮಾರು 10 ವರ್ಷಗಳ ಕಾಲ ಆಗಿದೆ ಎಂದರೆ ಸರಿ . ದಾವಾ ಸ್ವತ್ತಿನ ಉತ್ತರಕ್ಕೆ ಚಿಕ್ಕನಕೋಟೆಗೆ ಹೋಗುವ ಸಿ.ಸಿ ರಸ್ತೆ ಇದೆ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣಕ್ಕೆ ಉಳಿಕೆ ಗ್ರಾಮ ಠಾಣ ಮತ್ತು ನಾಲ್ಕನೇ ಪ್ರತಿವಾದಿಯ ಜಮೀನು ಇದೆ ಎಂದರೆ ಸಾಕ್ಷಿಯು ಗ್ರಾಮ ಠಾಣ ಇಲ್ಲ ಎಂದು ಮುಂದುವರೆದು ಜಮೀನು ಇದೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೆ ರಸ್ತೆ, ಹಾಗೂ ರಸ್ತೆಯ ಉತ್ತರಕ್ಕೆ ದೇವಸ್ಥಾನ ಇದೆ ಎಂದರೆ ಸರಿ. ಸದರೀ ದೇವಸ್ಥಾನವೂ ರಸ್ತೆಗೆ ಹೊಂದಿಕೊಂಡಿರುತ್ತದೆ. ಅಂಗನವಾಡಿಯ ಪಶ್ಚಿಮಕ್ಕೆ ಓವರ್ ಹೆಡ್ ಟ್ಯಾಂಕ್ ಇರುತ್ತದೆ ಎಂದರೆ ಸರಿ. ಅಂಗನವಾಡಿ ಕಟ್ಟಡಕ್ಕೂ ಮತ್ತು

ಓವರ್ ಹೆಡ್ ಟ್ಯಾಂಕ್ ಗೂ ಸುಮಾರು 50 ಅಡಿ ದೂರವಿರುತ್ತದೆ. ಅಂಗನವಾಡಿ ಕಟ್ಟಡದ ಉತ್ತರಕ್ಕೆ ಚಿಕ್ಕನಕೋಟೆಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಅಂಗನವಾಡಿಯ ಶಾಲೆಯ ಮಕ್ಕಳು compound ಒಳಗಡೆ ಆಟವಾಡುತ್ತಾರೆ ಎಂದರೆ ಸರಿ. ಗ್ರಾಮ ಠಾಣದ ಪೂರ್ವಕ್ಕೆ  ಮಾರಮ್ಮ ದೇವಿಯ  ಗದ್ದಿಗೆ ಇದೆ ಎಂದರೆ ಸಾಕ್ಷಿಯು ಗ್ರಾಮಾ ಠಾಣವು ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಮಾರಮ್ಮ ದೇವಿಯ  ಗದ್ದಿಗೆಯ ಉತ್ತರಕ್ಕೆ ನೀರಿನ ತೊಟ್ಟಿ ಮತ್ತು ಮಿನಿ ವಾಟರ್ ಟ್ಯಾಂಕ್ ಇದೆ ಎಂದರೆ ಸಾಕ್ಷಿಯು ಕೇವಲ ನೀರಿನ ತೊಟ್ಟಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಮಾರಮ್ಮ ದೇವಿಯ  ಗದ್ದಿಗೆಯ ದಕ್ಷಿಣಕ್ಕೆ ಆಲದ ಮರ ಇದೆ ಎಂದರೆ ಸರಿಯಲ್ಲ. ಮಾರಮ್ಮ ದೇವಿಯ  ಗದ್ದಿಗೆಯ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸಾಕ್ಷಿಯು ಶಿರಾದ ಹೆದ್ದಾರಿ ಇದೆ ಎಂದು ನುಡಿದಿರುತ್ತಾರೆ. ರಸ್ತೆ ಓಜನಕುಂಟೆಗೆ ಹೋಗಿ ಸೇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಒಕ್ಕಣೆಕಣ  ದಾಖಲಾತಿಯನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿ ಪ್ರಭಾವಿಗಳಾದ ಕಾರಣ ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಆದಲೂರು  ಗ್ರಾಮ ಠಾಣೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅಂಗನವಾಡಿ ಕಟ್ಟಡ, ಮಾರಮ್ಮ ದೇವಿಯ  ಗದ್ದಿಗೆ ಮತ್ತು ಮಿನಿ ವಾಟರ್ ಟ್ಯಾಂಕ್ ಎಷ್ಟು ವಿಸ್ತೀರ್ಣ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನದಲ್ಲಿದ್ದರೂ ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುನ್ನು ಸಾರ್ವಜನಿಕರು ಉಪಯೋಗಿಸುತಿಲ್ಲ ಎಂದರೆ ಸರಿಯಲ್ಲ. ನಾವು ಬೆಳೆದ ಬೆಳೆಗಳನ್ನು ದಾವಾ ಸ್ವತ್ತಿನಲ್ಲಿರುವ ಕಣದಲ್ಲಿ ಹಾಕಿಕೊಳ್ಳುತ್ತೇವೆ. ರೈತರು ದಾವಾ ಸ್ವತ್ತಿನ ಕಣದಲ್ಲಿ ಬೆಳೆಗಳನ್ನು ಹಾಕುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಶಿರಾ.